# ಫೋರ್ಟಿಸ್ ಆಸ್ಪತ್ರೆ: ಸೌಲಭ್ಯ ವಂಚಿತ 200 ಮಕ್ಕಳಿಗೆ ಹೃದಯಶಸ್ತ್ರಚಿಕಿತ್ಸೆ



ಬೆಂಗಳೂರಿನ ಫೋರ್ಟಿಸ್ ಹೆಲ್ತ್‌ಕೇರ್ ಕೈ ಜೋಡಿಸಿ ಮುಂದಿನ ವರ್ಷದಲ್ಲಿ ಸೌಲಭ್ಯ ವಂಚಿತ ದುರ್ಬಲ ವರ್ಗದ 200 ಮಕ್ಕಳಿಗೆ ಉಚಿತ ಹೃದಯ ಶಸ್ತ್ರಚಿಕಿತ್ಸೆಗಳನ್ನು ನಡೆಸಲಿದೆ. ದಿ ಆಸ್ಟಿನ್ ಫೌಂಡೇಷನ್, ನೀಡಿ ಹಾರ್ಟ್ ಫೌಂಡೇಷನ್, ವೈಟ್ ಕಾಲರ್ ಬೌಟ್ಸ್ ಫೌಂಡೇಷನ್ (ಡಬ್ಲ್ಯುಸಿಬಿ) ಮತ್ತು ಫಿಟ್‌ನೆಸ್ ಫೈಟಿಂಗ್ ಕ್ಲಬ್‌ಗಳ ಸಹಯೋಗದೊಂದಿಗೆ ಇದು ಜಾರಿಗೆ ಬರಲಿದೆ. ಇದಕ್ಕಾಗಿ ನಿಧಿಯನ್ನು ಬಾಕ್ಸಿಂಗ್ ಮತ್ತು ಕಿಕ್‌ಬಾಕ್ಸಿಂಗ್ ಫೈಟ್ ನೈಟ್, ವೈಟ್ ಕಾಲರ್ ಬೌಟ್ಸ್ ಮೂಲಕ ಸಂಗ್ರಹಿಸಲಾಗುವುದು. ಈ ಕಾರ್ಯಕ್ರಮ ಬೆಂಗಳೂರಿನ ತಾಜ್ ವೆಸ್ಟೆಂಡ್‌ನಲ್ಲಿ ನಡೆದಿದೆ. ಇದರಿಂದ ಬಂದ ಎಲ್ಲ ಹಣವನ್ನು ದುರ್ಬಲ ವರ್ಗದ ಮಕ್ಕಳ ಹೃದಯ ಶಸ್ತ್ರಚಿಕಿತ್ಸೆಗಳಿಗಾಗಿ ಬಳಸಲಾಗುವುದು.

ಫಿಟ್‌ನೆಸ್ ಫೈಟ್ ಕ್ಲಬ್ ಮತ್ತು ಡಬ್ಲ್ಯುಸಿಬಿನ ಸ್ಥಾಪಕ ಆಸ್ಟಿನ್ ಪ್ರಕಾಶ್ ಮಾತನಾಡಿದರು. ವಯಸ್ಕರ ಮತ್ತು ಮಕ್ಕಳ ಹೃದಯ ಶಸ್ತ್ರಚಿಕಿತ್ಸಾ ತಜ್ಞ ಡಾ. ಜೋಸೆಫ್ ಕ್ಸೇವಿಯರ್ ಮಾತನಾಡಿ, ''ಪ್ರತಿ ವರ್ಷ 1.5 ಲಕ್ಷ ಶಿಶುಗಳು ಜನ್ಮಜಾತ ಹೃದಯ ರೋಗದೊಂದಿಗೆ ಜನಿಸುತ್ತಿದ್ದು, ಸೂಕ್ತ ಆರೋಗ್ಯ ಸೌಲಭ್ಯ ಇಲ್ಲದಿರುವುದರಿಂದ ಮೃತಪಡುತ್ತಿವೆ. ದುರ್ಬಲರಿಗೆ ನೆರವಾಗುವ ಇಚ್ಛೆ ಹೊಂದಿದ್ದೇವೆ,'' ಎಂದರು. ಫೋರ್ಟಿಸ್ ಹಾಸ್ಪಿಟಲ್ಸ್ ವಲಯ ನಿರ್ದೇಶಕ ಡಾ. ಮನೀಶ್ ಮಟ್ಟು ಮಾತನಾಡಿದರು.